ದಿನಾಂಕಃ- 25.02.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ . ಎಂ ಬಿ ಆರ್ ವಕೀಲರಿಂದಃ-

38. ನನ್ನ ಕುಟುಂಬಕ್ಕೆ ಸಂಬಂಧಿಸಿದ ಪಂಪ್ ಸೆಟ್ ಗೆ ಮತ್ತು ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ ರವರ ಪಂಪು ಸೆಟ್ಟುಗಳಿಗೆ ವಿದ್ಯುತ್ ಇಲಾಖೆಯವರು MIP 8659, 8588 ಮತ್ತು 8944 ನೇ ಮೀಟರುಗಳನ್ನು ಕ್ರಮವಾಗಿ 01.09.2014, 18.08.2014 ಮತ್ತು 31.03.2015 ರಂದು ಕೂರಿಸಿದ್ದಾರೆ ಎನ್ನುವುದು ನನಗೆ ಗೊತ್ತಾಗುವುದಿಲ್ಲ (ನಿಡಿ.1).

39. ನಾನು ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ 5 HP ಸಾಮರ್ಥ್ಯದ ಮೋಟಾರುಗಳನ್ನು ಕೂರಿಸಿದ್ದೇವೆ ಎನ್ನುವುದು ನಿಜ. ನನಗೆ MIP ಎಂದರೆ ಅರ್ಥವಾಗುವುದಿಲ್ಲ. ನನಗೆ MIP ಎಂದರೆ Maddur Irrigation pump-set ಎನ್ನುವ ಅರ್ಥ ಎನ್ನುವುದು ಗೊತ್ತಿರುವುದಿಲ್ಲ.

40. ನನ್ನಿಂದ ಮತ್ತು ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ ರವರುಗಳಿಂದ ದಂಡ ಕಟ್ಟಿಸಿಕೊಂಡ ನಂತರ MIP 8659, 8588 ಮತ್ತು 8944 ನೇ ಮೋಟಾರುಗಳನ್ನು ಕೂರಿಸಿದ್ದಾರೆ ಎನ್ನುವುದು ಸರಿಯಲ್ಲ. ನಮ್ಮಿಂದ ದಂಡದ ಹಣ ಕಟ್ಟಿಸಿಕೊಂಡ ನಂತರ ಒಂದು transformer ಅನ್ನು ಕೂರಿಸಿದ್ದಾರೆ.

41. ಗುರುದೇವರಹಳ್ಳಿ ಗ್ರಾಮದಲ್ಲಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಇಲಾಖೆಯವರು ಮೀಟರುಗಳನ್ನು ಕೂರಿಸಿಲ್ಲ. Transformer ಕೂರಿಸಿರುವ ಮೊದಲು ನಮ್ಮ ಪಂಪು ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಇಲ್ಲದೇ ಇರುವುದರಿಂದ voltage ಹೆಚ್ಚು ಕಡಿಮೆ ಆಗುವ ಅವಕಾಶ ಇರಲಿಲ್ಲ.

42. ನನಗೆ ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ ರವರ ಪಂಪು ಸೆಟ್ಟುಗಳಿಗೆ ಸೇರಿ ಒಂದು Transformer ಕೂರಿಸಿದ್ದಾರೆ.

43. ಗುರುದೇವರಹಳ್ಳಿ ಗ್ರಾಮದಲ್ಲಿ ವಿದ್ಯುತ್ ಇಲಾಖೆಯವರು ಎಷ್ಟು Transformer ಕೂರಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

44. ಯಾವ ದಿನಾಂಕ ತಿಂಗಳು, ಅಥವಾ ಇಸವಿಯಲ್ಲಿ ನನ್ನ ಮತ್ತು ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ ರವರುಗಳ ಪಂಪು ಸೆಟ್ಟುಗಳಿಗೆ ಒಂದು Transformer ಕೂರಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

45. ನಾನು ಲೋಕಾಯುಕ್ತ ಪೊಲೀಸರಿಗೆ ದೂರು ಕೊಟ್ಟ ಒಂದು ವಾರದ ಒಳಗೆ ವಿದ್ಯುತ್ ಇಲಾಖೆಯವರು ನಮ್ಮ 3 ಜನರ ಪಂಪು ಸೆಟ್ಟುಗಳಿಗೆ ಸೇರಿ ಒಂದು Transformer ಕೂರಿಸಿದರು. Transformer ಕೂರಿಸುವ ಸಮಯದಲ್ಲಿ ಅಥವಾ ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ ರವರುಗಳಿಂದ ಅರ್ಜಿಗಳನ್ನು ಪಡೆಯಲಿಲ್ಲ ಅಥವಾ ನಕಾಶೆಗಳನ್ನು ತಯಾರಿಸಲಿಲ್ಲ.

46. ಗುರುದೇವರಹಳ್ಳಿ ಗ್ರಾಮದಲ್ಲಿ ನನ್ನ ಗದ್ದೆಯ ಮಾಲೀಕತ್ವದ ಹತ್ತಿರ ಆರೋಪಿ Transformer ಕೂರಿಸಲು ಹಣ ಕೇಳಿದರು. ಆ ಸಮಯದಲ್ಲಿ ಅಂದರೆ ಆರೋಪಿ ನನ್ನಿಂದ ಹಣ ಕೇಳಿದ ಸಮಯದಲ್ಲಿ ನನ್ನ ಜೊತೆ ಲೋಕೇಶ (ಚಾಸಾ–4) ಇದ್ದನು. ಆರೋಪಿ ನನ್ನಿಂದ ಹಣ ಕೇಳಿದ ಜಾಗದಲ್ಲಿ ಲೊಕೇಶನನ್ನು ಹೊರತುಪಡಿಸಿ ವಿದ್ಯುತ್ ಇಲಾಖೆಯ ಸಿಬ್ಬಂದಿ ಲೋಕಾಯುಕ್ತ ಪೊಲೀಸ್ ಸಿಬ್ಬಂದಿ ಇರಲಿಲ್ಲ.

47. ಆರೋಪಿ ನನ್ನಿಂದ ಹಣ ಕೇಳಿದ ದಿನ ಮೊದಲು ನಾನು ಆರೋಪಿಯ ಕಛೇರಿಯ ಹತ್ತಿರ ಹೋಗಿದ್ದೆನು. ಆಗ ಆರೋಪಿ ಜಮೀನಿನ ಹತ್ತಿರ ನಡಿ estimate ತಯಾರಿಸಲು ಬರುತ್ತೇನೆ ಎಂದು ಹೇಳಿದ್ದರಿಂದ ನಾನು ಜಮೀನಿನ ಹತ್ತಿರ ಹೋದೆನು. ಆ ಸಮಯದಲ್ಲಿ ಆರೋಪಿ ನಾನು ಮತ್ತು ಲೊಕೇಶ ಇದ್ದ ಸ್ಥಳಕ್ಕೆ

ಬಂದರು. ಆ ಸಮಯದಲ್ಲಿ ಆರೋಪಿ ಯಾವುದೇ ರೀತಿಯ ನಕಾಶೆಯನ್ನು ತಯಾರಿಸಲಿಲ್ಲ. ಆ ಸಮಯದಲ್ಲಿ ಆರೋಪಿ ಬರೀ ಕೈಯಲ್ಲಿ (ಯಾವುದೇ ರೀತಿಯ ಅರ್ಜಿಯ ನಕಲುಗಳನ್ನು ತರದೇ) ಬಂದಿದ್ದರು. ಆ ಸಮಯದಲ್ಲಿ ನಾನು ಆರೋಪಿಗೆ ಯಾವುದೇ ರೀತಿಯ ದಾಖಲೆಗಳನ್ನು (ಅರ್ಜಿ ಅಥವಾ ವಿದ್ಯುತ್ ಇಲಾಖೆಗೆ ಹಣ ಕಟ್ಟಿದ ರಶೀದಿಯ ನಕಲುಗಳನ್ನು) ತೋರಿಸಲಿಲ್ಲ.

48. ಪ್ರಶ್ನೆ – ದೂರಿನಲ್ಲಿ ಆರೋಪಿ ಜಮೀನಿನ ಹತ್ತಿರ ಬಂದಾಗ ಹಣ ಕೇಳಿದರು ಯಾವುದೇ ರೀತಿಯ ನಕಲು ದಾಖಲೆಗಳನ್ನು ಕೇಳಲಿಲ್ಲ ಎಂದು ದೂರಿನಲ್ಲಿ ಅಥವಾ ಹೇಳಿಕೆ ದಾಖಲೆಯಲ್ಲಿ ಬರೆಸಿರುವಿರಾ ?

ಉತ್ತರ– ನೆನಪಿಲ್ಲ.

49. ಆರೋಪಿ ಒಂದು ದಿನ ಮಾತ್ರ ನನ್ನ ಮಾಲೀಕತ್ವದ ಜಮೀನಿನ ಹತ್ತಿರ ಬಂದಿದ್ದರು.

50. ಆರೋಪಿ ನನ್ನಿಂದ ಹಣ ಕೇಳಿದ ದಿವಸ ಆರೋಪಿಯ ಕೈಯಲ್ಲಿ ನಾನು ಅಥವಾ ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ Transformer ಕೂರಿಸುವಂತೆ ಕೇಳಿ ಕೊಟ್ಟಿದ್ದ ಅರ್ಜಿ ಇರಲಿಲ್ಲ. ಆದರೆ ಅವರ ಕಛೇರಿಯಲ್ಲಿ ಅರ್ಜಿ ದಾಖಲೆಗಳು ಇದ್ದವೇ ಅಥವಾ ಇಲ್ಲವೇ ಎನ್ನುವುದು ನನಗೆ ಗೊತ್ತಿಲ್ಲ.

51. ನಾನು ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ ನಮ್ಮ ಪಂಪು ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು Transformer ಕೂರಿಸುವಂತೆ ಅರ್ಜಿಯನ್ನು ವಿದ್ಯುತ್ ಇಲಾಖೆಯವರಿಗೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

52. 2015 ನೇ ನವೆಂಬರ್ ತಿಂಗಳಿನಲ್ಲಿ ನನ್ನ ಮತ್ತು ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ ರವರುಗಳ ಪಂಪು ಸೆಟ್ಟುಗಳಿಗೆ ವಿದ್ಯುತ್ ಪೂರೈಸಲು Transformer ಕೂರಿಸಲು ಆರೋಪಿ ಯಾವುದೇ ರಿತೀಯಲ್ಲಿ ಹಣ ಕೇಳಿಲ್ಲ ಎನ್ನುವುದು ಸರಿಯಲ್ಲ.

53. ನಾನು 26.11.2015 ರಂದು ನನ್ನ ಮತ್ತು ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ ರವರುಗಳ ಪಂಪು ಸೆಟ್ಟುಗಳಿಗೆ ವಿದ್ಯುತ್ ಪೂರೈಸಲು Transformer ಕೂರಿಸುವ ಸಲುವಾಗಿ ಆರೋಪಿಯ ಕೈಗೆ ಆರೋಪಿ ಕೇಳಿದಂತೆ 20,000/- ರೂಗಳನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

54. ನಾನು 2015 ನೇ ನವೆಂಬರ್ ತಿಂಗಳಿನಲ್ಲಿ ಆರೋಪಿಯ ವಿರುದ್ಧ ಆರೋಪಿ Transformer ಕೂರಿಸಲು 20,000/- ರೂಗಳ ಲಂಚ ಕೇಳಿದ್ದಾರೆ ಎಂದು ಸುಳ್ಳು ದೂರು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

55. ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

56. ನನ್ನ ಮಾಲೀಕತ್ವದ ಪಂಪು ಸೆಟ್ಟು ಪುಟ್ಟಸ್ವಾಮಿ ಬಿನ್ ಬೋರೆಗೌಡ, ಗುರುದೇವರಹಳ್ಳಿ ಮತ್ತು ರತ್ನಮ್ಮ ಕೋಂ ಚನ್ನೇಗೌಡ ರವರುಗಳ ಮಾಲೀಕತ್ವದ ಪಂಪು ಸೆಟ್ಟುಗಳಿಗೆ ವಿದ್ಯುತ್ ಪೂರೈಸಲು Transformer ಕೂರಿಸಲು ಆರೋಪಿ ಯಾವುದೇ ಸ್ಥಳದಲ್ಲಿ 20,000/- ರೂಗಳನ್ನು ಯಾವುದೇ ಬಾಬ್ತು ಕೊಡುವಂತೆ ಕೇಳಿಲ್ಲ ಎನ್ನುವುದು ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲನ್ನು 02.04.2026 ಕ್ಕೆ ಮೂಂದೂಡಲಾಯಿತು.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.